THE MYSORE LEGISLATIVE ASSEMBLY

FIFTEENTH DAY.

Thursday, 26th March 1953.

The House met in the Assembly Hall, Old Public Offices, Bangalore, at Twelve of the Clock.

Mr. SPEAKER (Sri H. SIDDAIYA, B.A., LL.B.) in the Chair.

QUESTIONS AND ANSWERS.

Regulated Markets for Areca in the State.

Q.—275. Sri S. GOPALA GOWDA (Sagar-Hosanagar).—

Will the Government be pleased to state:—

(*a*) the area of arecanut gardens and the quantity of arecanut produced in the current year in each district of the State;

(*b*) the names of places where areca is marketed in the State and the quantity of areca so marketed in each place;

(*c*) the names of places where Regulated Markets have been introduced in the State and to which commodities;

(*d*) the rate of areca in every such market at the time of the introduction of the Regulated Market in Shimoga;

(*e*) whether it is fact that arecanut rates had a steep fall after the introduction of the Regulated Market; if so, what the extent of the fall of prices is?

(*f*) whether there has been an agitation for withdrawal of the Regulated Market from Shimoga;

(*g*) the steps taken to safeguard the interests of the growers?

A.—Sri H. SIDDAVEERAPPA (Minister for Home and Industries).—

(*a*) Information for the current year is not readily available; but information for the year 1951-52 is furnished below:—

District	*Area in acres*	*Yield in tons*
1 Bangalore ..	274	35
2 Kolar ..	158	100
3 Tumkur ..	5,895	1,260
4 Mysore ..	2,416	231
5 Mandya ..	1,073	165
6 Hassan ..	1,898	204
7 Shimoga ..	15,297	4,775
8 Chikmagalur ..	11,931	3,395
9 Chitaldrug ..	3,837	767
Total ..	42,779	10,932

	Tons.
(*b*) Shimoga ..	100,000
Sagar ..	30,000
Birur (about) ..	25,000
Tarikere (about)	25,000
Koppa (about) ..	25,000
Tumkur ..	10,000
Sira ..	5,000
Bangalore ..	5,000

(*c*) Statement appended below.

(*d*) At Shimoga—

	Rupees per maund.
1. Kadi Hassan ..	49 to 54
2. Hassan ..	43 to 48
3. Kappu Rasi ..	43 to 45
4. Bette ..	26 to 32

At Sagar—

1. Hassan ..	48 to 52
2. Rasi ..	44 to 49
3. Bette ..	30 to 34

(SRI H. SIDDAVEERAPPA.)

At Bangalore—

1. Desavaram	..	49 to 51
2. Rajalu	..	49 to 51
3. Nuli	..	50 to 52
4. Bette	..	36 to 38
5. Malabarchur	..	45 to 46
6. Birur Chur	..	52 to 54

(*e*) There was a considerable fall in the prices of arecanut during the year 1952 when compared with the prices in 1951. The extent of fall in prices varies from 8 per cent to 20 per cent. But the fall in prices is mainly due to the general slump in prices of other agricultural commodities.

(*f*) Yes. In the month of December 1952 some of the areca growers of Shimoga and Chikmagalur Districts represented to the Government and also to the Chief Marketing Officer for the abolition of Regulated Market at Shimoga. But of late, its advantages are being greatly appreciated and the marketing of areca is being conducted smoothly to the best advantages of the growers.

(*g*) The following steps have been taken by the Market Committee to give more facilities to the growers in the marketing of areca at Shimoga :—

(i) Market charges to be paid by the grower have been reduced and the unwarranted ones prohibited.

(ii) Correct weighment is ensured to the grower by licensed weighmen of the Regulated Market Committee.

(iii) Market practices and usages are regularised.

(iv) Arrangements are made for the settlement of disputes regarding quality, weighment, deductions, etc.

(v) The merchants coming from outside are licensed temporarily at a licence fee of Re. 1 per week just to facilitate outsiders also to participate in the business and thereby to increase the daily sales, as also the prices for the commodity.

(vi) Tender system of sale of arecanuts is being introduced in place of the existing system of auction sales and the results watched as per representations of the grower.

(vii) Arecanuts are being weighed immediately after sale and before they are sorted into several varieties.

(viii) Arrangements have been made to publish the areca rates prevailing at Shimoga, Madras, Palghat and Sagar for the information of growers and also merchants.

(ix) Arrangements have also been made by the Committee for the conduct of sales in each Mandi on alternate days. If on any particular day there is no business in a certain Mandi and if the grower desires that his commodity should be sold on the same day, the Committee have made arrangements to sell the commodity of such persons also.

(x) As represented by the growers a Gazetted Officer has been posted to the Regulated Market as Secretary.

Statement referred to in reply to clause (c).

Commodities.

1. Chitaldrug Market.—
   (1) Cotton, (2) Groundnuts, (3) Castor, (4) Horsegram, (5) Blackgram, (6) Coriander, (7) Sesamum, (8) Avare, (9) Greengram, (10) Gingelly, (11) Togare, (12) Niger, (13) Copea, (14) Bengalgram, (15) Jaggery and (16) Chillies.

2. Davangere.—
   (1) Groundnuts, (2) Cotton, (3) Cotton seeds, (4) Sesamum, (5) Niger, (6) Castor seeds, (7) Horsegram, (8) Bengalgram, (9) Greengram, (10) Blackgram, (11) Avare, (12) Togare, (13) Coriander, (14) Cowpea, (15) Chillies and (16) Jaggery.

3. Shimoga.—
   Arecanuts.

4. Tumkur.—
   (1) Groundnuts, (2) Jaggery, (3) Tamarind and (4) Honge seeds.

5. Tiptur.—

(1) Cocoanuts, (2) Cowpea, (3) Jaggery, (4) Seegu, (5) Groundnuts and (6) Sesamum.

6. Mysore.—

(1) Groundnuts, (2) Til seeds, (3) Castor, (4) Niger, (5) Hongey, (6) Horsegram, (7) Greengram, (8) Avare, (9) Urd, (10) Cowpea, (11) Jaggery, (12) Chillies, (13) Tamarind, (14) Soapnut and (15) Cocoanuts.

7. Arsikere Market.—

(1) Cocoanuts and Copra (2) Jaggery, (3) Cotton and (4) Seegu.

ಶ್ರೀ ಎಸ್. ಗೋಪಾಲಗೌಡ.—ಬೆಲೆ ಇಳಿಯುವುದಕ್ಕೆ general slump ಕಾರಣವೆಂದು ತಾವಿಲ್ಲಿ ತಿಳಿಸಿದ್ದೀರಿ. ಆದರೆ ಇದರ ಜೊತೆಗೆ ಮಂಡೀಮಾಲೀಕರ ಮತ್ತು ದಳ್ಳಾಳಿಗಳ ಕೈವಾಡವೇನಾದರೂ ಇತ್ತೆ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾನು ಹೇಳುವುದಕ್ಕೆ ಕಷ್ಟವಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಬೆಲೆ ಇಳಿಯುವುದಕ್ಕೆ ಆ general slump ಒಂದೇ ಕಾರಣವೆಂಬುದು ತಮ್ಮ ಖಚಿತವಾದ ಅಭಿಪ್ರಾಯವೋ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಅದೇ ನಮ್ಮ ಖಚಿತವಾದ ಅಭಿಪ್ರಾಯ. ಆದರೆ ತಮ್ಮ ಅಭಿಪ್ರಾಯಕ್ಕೆ ಉತ್ತರಕೊಡುವುದು ಬಹಳ ಕಷ್ಟ.

ಶ್ರೀ ಎಸ್. ಗೋಪಾಲಗೌಡ.—ಈ ಅಡಿಕೆ ಮಾರಾಟದ ಮೇಲೆ ಸೇಲ್ಸ್‌ಟ್ಯಾಕ್ಸ್‌ನ್ನು ಹಾಕಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ. ಹೊರಗಡೆ ಹೋಗತಕ್ಕ ಮಾಲಿಗೆ ವಿಧಿಸಿಲ್ಲ. ಇಲ್ಲೇ ಸ್ಥಳದಲ್ಲೇ ಮಾರಾಟವಾಡತಕ್ಕದ್ದಕ್ಕೆ ಉಂಟು.

ಶ್ರೀ ಎಸ್. ಗೋಪಾಲಗೌಡ.—ಮಂಡಿಯಲ್ಲಿ ತಂದು ಹಾಕಿದ್ದ ಅಡಿಕೆಯ ಮೇಲೆ ಈ ಸುಂಕ ವಿಧಿಸುತ್ತೀರೋ, ಅಥವಾ ದಳ್ಳಾಳಿಗಳ ಮೂಲಕ ವ್ಯಾಪಾರವಾಗತಕ್ಕ ಅಡಿಕೆಯ ಮೇಲೆ ವಿಧಿಸುತ್ತೀರೋ, ಅಥವಾ ಮಾರಾಟಕ್ಕೆ ರೈತರು ತರುವ ಅಡಿಕೆಯ ಮೇಲೆ ಈ ತೆರಿಗೆ ಹಾಕುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಅಡಕೆ ವ್ಯವಸಾಯಗಾರರು ತಂದು ಮಾರಾಟಮಾಡುವ ಅಡಕೆಯ ಮೇಲೆ ಈ ಸೇಲ್ಸ್‌ಟ್ಯಾಕ್ಸ್‌ನ್ನು ವಿಧಿಸುತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ-ಸಾಗರದಲ್ಲಿ ಈ ಅಡಿಕೆ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಅವಶ್ಯಕತೆಯಿರುವಂತೆ ತರೀಕೆರೆಗೂ ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟಿನ ಅವಶ್ಯಕತೆಯಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇದೆ.

ಶ್ರೀ ಎಸ್. ಗೋಪಾಲಗೌಡ.—(ಜಿ) ಪ್ರಶ್ನೆಗೆ ಒದಗಿಸಿರತಕ್ಕ ಉತ್ತರದಲ್ಲಿ ಸೂಚಿಸಿರತಕ್ಕ ಎಲ್ಲಾ ಅಂಶಗಳನ್ನೂ ಕಾರ್ಯ ರೂಪಕ್ಕೆ ತರುತ್ತಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ತರುತ್ತಿದ್ದೇವೆ. ಇದು ಪ್ರಾರಂಭವಾದದ್ದೇ ತಾ॥ 2-1-51ರಲ್ಲಿ. 2-1-52ಕ್ಕೆ ಒಂದು ವರ್ಷವಾಯಿತು. Business commence ಆಗಿದೆ. ಎಲ್ಲ ಕಾರ್ಯಕ್ರಮಗಳನ್ನೂ ತ್ವರಿತವಾಗಿ ಕೈಕೊಳ್ಳುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗಿಯಲ್ಲಿ ಒಟ್ಟು ಎಷ್ಟು ಅಡಿಕೆ ಸೊಸೈಟಿಗಳಿವೆ?

ಶ್ರೀ ಎಚ್. ಸಿದ್ದವೀರಪ್ಪ.—ಸುಮಾರು 22.

ಶ್ರೀ ಎಸ್. ಗೋಪಾಲಗೌಡ.—ಕೆಲವರು ಈ ಅಡಿಕೆಯನ್ನು ತಾವು ವ್ಯಾಪಾರಮಾಡುತ್ತಿರುವ ಕಡೆ ದಾಸ್ತನು ಮಾಡುತ್ತಿದ್ದರೂ, ತಾವು ವಾಸಿಸುವ ಕಡೆಗಳಲ್ಲೂ ಕೂಡ ವಿಶೇಷವಾಗಿ ದಾಸ್ತಾನುಮಾಡಿಕೊಂಡು, ಅಲ್ಲೇ ಈ ವ್ಯವಹಾರ ನಡೆಸತಕ್ಕವರೂ ಕೂಡ ಇದ್ದಾರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಅಂಥವರೆಲ್ಲ ಈ ವ್ಯಾಪಾರದ ನಿಗಾನೋಡಲು ನೇಮಿಸಿರತಕ್ಕ ಅಧಿಕಾರಿಗಳ ದೃಷ್ಟಿಗೆ ಬೀಳಲು ಕಷ್ಟವಾಗಿರುತ್ತಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಆ ರೀತಿಯ ನಾನಾ ತೊಂದರೆಗಳಿವೆ. ಆದರೆ ಇದಿನ್ನೂ ಟ್ಯಾಕ್ಸಿಷ್ಟ್ ಪೀರಿಯಡ್.

ಶ್ರೀ ಎಸ್. ಗೋಪಾಲಗೌಡ—ಈ ಎಲ್ಲವನ್ನೂ ಬೇಗ ಒಂದು ಪೂರ್‌ಸಿಸ್ಟಂಗೆ ತರತಕ್ಕ ಬಗ್ಗೆ ಒಂದು ವ್ಯವಸ್ಥೆಯನ್ನು ಕೈಕೊಳ್ಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದಷ್ಟು ಬೇಗ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಸಂಸ್ಥಾನದ ಹೊರಗಡೆಯಿಂದ ಇಲ್ಲಿಗೆ ಬರತಕ್ಕ ಅಡಿಕೆಯನ್ನು ಸ್ವಲ್ಪ ಸ್ವಲ್ಪವಾಗಿ ರಿಲೀಸ್ ಮಾಡಲು ಅವಕಾಶಮಾಡಿದ್ದೀರಾ?

Sri H. SIDDAVEERAPPA.—Those are matters of detail. The Committee is looking after those things.

ಶ್ರೀ ಎಸ್. ಗೋಪಾಲಗೌಡ.—ಈ ಸಂದರ್ಭದಲ್ಲಿ ಒಂದು ಸಮಿತಿಯನ್ನು ತಾವು ರಚನೆಮಾಡಿದ್ದೀರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಕೇಳುತ್ತಿರುವ ಸಮಿತಿಯಾವುದೋ ನನಗೆ ಗೊತ್ತಾಗಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ್ಗೆ ಸುಮಾರು 1 ಅಥವಾ $1\frac{1}{2}$ ವರ್ಷಗಳ ಹಿಂದೆ ಒಂದು ಖಾಸಗೀ ಜನರಿಂದೊಳಗೊಡಿದ ಸಮಿತಿಯನ್ನು ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಬಗ್ಗೆ ರಚಿಸಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಈ ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನು ಯಾವ ರೀತಿ ಕ್ರಮಗೊಳಿಸಬೇಕೆಂಬ ವಿಚಾರವಾಗಿ, having representatives of growers and traders and also with the Registrar of Co-operative Societies as the Chairman. ಒಂದು ಸಮಿತಿಯನ್ನು ನೇಮಕಮಾಡಲಾಗಿತ್ತು.

ಶ್ರೀ ಎಸ್. ಗೋಪಾಲಗೌಡ.—ಆದರ ಸದಸ್ಯರೆಲ್ಲ ನಾಮಕರಣಮಾಡಲ್ಪಟ್ಟವರೋ ಅಥವಾ ಚುನಾಯಿತ ಸದಸ್ಯರೋ?

ಶ್ರೀ ಎಚ್. ಸಿದ್ದವೀರಪ್ಪ.—ನಾಮಕರಣಮಾಡಲ್ಪಟ್ಟವರು.

ಶ್ರೀ ಎಸ್. ಗೋಪಾಲಗೌಡ.—ಈ ಅಡಕೆತೂಕ ಮಾಡತಕ್ಕವರು 30–40 ರೂಪಾಯಿಗಳ ಸಂಬಳವನ್ನೇ ಅಡಕೆ ಮಂಡಿಯವರಿಂದ ಪಡೆದುಕೊಂಡು ಈ ತೂಕವನ್ನು ಅವರ ಮರ್ಜಿಗನುಸಾರವಾಗಿ ಮಾಡುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಂಥದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮವನ್ನು ಬೇಗ ಕೈಕೊಳ್ಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಲಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶಾಲುವಿನಲ್ಲಿ ಕೈಯ್ಯಿಟ್ಟುಕೊಂಡು ಮಾಡತಕ್ಕ ವ್ಯಾಪಾರವನ್ನು ಜಾರಿಗೆತಂದಿದ್ದೀರೋ ಅಥವಾ ಟೆಂಡರ್‌ಮೂಲಕ ಕೊಡತಕ್ಕ ಪದ್ಧತಿಯನ್ನು ಜಾರಿಗೆ ತಂದಿದ್ದೀರೋ?

ಶ್ರೀ ಎಚ್. ಸಿದ್ದವೀರಪ್ಪ.—ರೆಗ್ಯುಲೇಟೆಡ್ ಆಕ್ಟಿನ ಪರಿಮಿತಿಯಲ್ಲಿ ಹೇಗೆ ಮಾಡಬೇಕೋ ಹಾಗೆ ಮಾಡಲಾಗುತ್ತಿದೆ. ಆ ಬೈಲಾ ಪರಿಮಿತಿಗನುಸಾರವಾಗಿ ಮಾಡಲಾಗುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ಹಾಲು ಜಾರಿಯಲ್ಲಿ ಇರತಕ್ಕದ್ದು ಯಾವ ಪದ್ಧತಿ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಹೇಳತಕ್ಕದ್ದೆಲ್ಲಾ ಗತವೈಭವದ ಮಾತಾಯಿತು, ಈಗ ಎಲ್ಲಾ ನವೀನ ಪದ್ಧತಿಗಳು ಜಾರಿಗೆ ಬಂದಿವೆ.

ಶ್ರೀ ಎಸ್. ಗೋಪಾಲಗೌಡ.—ಆ ಶಾಲುವಿನ ಪದ್ಧತಿಯನ್ನು ತಪ್ಪಿಸಿರುತ್ತೀರಾ ಎಂಬುದು ನನ್ನ ಪ್ರಶ್ನೆ, ನಾನು ಗತವೈಭವವನ್ನು ಕೇಳಲಿಲ್ಲ!

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಡೆಯುತ್ತಿರುವ ವ್ಯಾಪಾರ, ವ್ಯವಹಾರಗಳೆಲ್ಲವೂ ಬಹಿರಂಗ ಮತ್ತು ರಾಜಾರೋಷ.

ಶ್ರೀ ಎಸ್. ಗೋಪಾಲಗೌಡ.—ಪರಸ್ಥಳದಿಂದ ಬರತಕ್ಕ ಅಡಕೆಗೆ ಸುಂಕ ವಿಧಿಸಲಾಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಅನುಕೂಲ ಮಾಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೆವು. ಆ ಬಗ್ಗೆ ಒಂದು ಕಾನೂನನ್ನು ಜಾರಿಗೆ ತರುವುದಾಗಿ ತಿಳಿಸಿದ್ದಾರೆ. ಅದಕ್ಕಾಗಿ ನಾವು ಅವರಿಗೆ ತುಂಬಾ ಕೃತಜ್ಞರಾಗಿರಬೇಕಾಗಿದೆ. ನಮ್ಮ ಅಡಕೆ ಮಾರಾಟಗಾರರ ಸ್ಥಿತಿ ಆದರಿಂದ ಉತ್ತಮ ಗೊಳ್ಳಲು ಅವಕಾಶವಾಗುತ್ತದೆ. It is exactly for that reason the import duty has been enhanced.

ಶ್ರೀ ಎಸ್. ಗೋಪಾಲಗೌಡ.—ಪರಸ್ಥಳದ ಅಡಕೆ ನಮ್ಮ ಶೀಮೆಗೆ ಬಂದರೆ ನಮ್ಮ ಅಡಕೆಗೆ ಗಿರಾಕಿಗಳು ಇರುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—Those are all matters of detail. Strictly they will not arise out of this.

Mr. SPEAKER.—The Government of India also to do something.

ಶ್ರೀ ಎಸ್. ಗೋಪಾಲಗೌಡ.—ಕೆಲವು ಅಡಕೆ ವರ್ತಕರು, ಅಡಕೆಬೆಳೆಯತಕ್ಕವರಿಗೆ ಹಣವನ್ನು ಮುಂಗಡವಾಗಿ ಕೊಡುತ್ತಿದ್ದರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಈಗ ಆ ರೀತಿಯಾಗಿ ಹಣವನ್ನು ಮುಂಗಡವಾಗಿ ಕೊಡುವುದಿಲ್ಲವೆಂದು ಹೇಳುತ್ತಿರುವುದರಿಂದ ಆ ರೈತರಿಗೆ ಎಷ್ಟು ತೊಂದರೆಯಾಗಿರುತ್ತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ತೊಂದರೆಗಳೆಲ್ಲಾ ಬರಬಹುದೆಂದು ಆಲೋಚನೆಮಾಡಿಯೇ ನಾವು ಅನೇಕ ಸೊಸೈಟಿಗಳನ್ನು ಆ ಬಗ್ಗೆತೆರೆದಿರುತ್ತೇವೆ. ಅವರು ಅವುಗಳಿಂದ ಅನುಕೂಲ ಪಡೆದುಕೊಳ್ಳಬಹುದು.

ಶ್ರೀ ಎಸ್. ಗೋಪಾಲಗೌಡ.—ಈ ಸಾಲ ಕೊಡತಕ್ಕದ್ದನ್ನು ಇನ್ನೂ ಬಡಾವಣೆ ಮಾಡತಕ್ಕ ಬಗ್ಗೆ ರಿಸರ್ವ್ ಬ್ಯಾಂಕಿನಿಂದ ಬರತಕ್ಕ ಹಣದಲ್ಲಿ ಈ ಸೊಸೈಟಿಗಳಿಗೆ ಹೆಚ್ಚಿನ ಹಣ ಒದಗಿಸುತ್ತೀರಾ? ಹಾಗೆ ಅಡಿಕೆ ಬೆಳೆಯತಕ್ಕವರಿಗೆ ಒಂದು ಉತ್ತೇಜನ ಒದಗಿಸುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ ರಿಸರ್ವ್ ಬ್ಯಾಂಕಿನಿಂದ ಬರತಕ್ಕ ಹಣದಿಂದ ಅಡಕೆ ವ್ಯವಸಾಯಗಾರರಿಗೆ ತುಂಬ ಅನುಕೂಲವಾಗುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಚಿತ್ರದುರ್ಗದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪಿತವಾಗಿ ಎಷ್ಟು ದಿವಸಗಳಾಯಿತು?

Sri H. SIDDAVEERAPPA.—I have given details. ಯಾವ ಯಾವ ಮಾರ್ಕೆಟಿಂಗ್ ಸೊಸೈಟಿ ಯಾವ ಯಾವ ತಾರೀಖಿನಿಂದ ಕೆಲಸ ಮಾಡುತ್ತಿದೆಯೆಂಬುದನ್ನು ಉತ್ತರದಲ್ಲಿ ತಿಳಿಸಲಾಗಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಲಿ ಮಾರ್ಕೆಟ್ ಯಾರ್ಡ್ ಇಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮಾರ್ಕೆಟ್ ಯಾರ್ಡ್ ಇಲ್ಲದಿರುವುದರಿಂದ ರೈತರುಗಳು ಆಯಾ ದಿನವೇ ತಮ್ಮ ದಿನಸಿಗಳನ್ನು ಮಾರಾಟವಾಗದೆ ಇದ್ದಾಗ ಇಡಲು ಜಾಗವಿಲ್ಲದೆ ನಷ್ಟಪಟ್ಟುಕೊಂಡು ಮಾರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDVEERAPPA.—The market yard is a necessity. Therefore we have asked the municipal authorities in Chitaldrug to take up that question and I promised to help them to the extent I can.

ಶ್ರೀ ಮುಲ್ಕ ಗೋವಿಂದರೆಡ್ಡಿ.—ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯವರು ಇದಕ್ಕಾಗಿ ಧನ ಸಹಾಯ ಬೇಕೆಂದು ಹೇಳಿ ಸರ್ಕಾರದವರನ್ನು ಸಾಲ ಕೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಕೇಳಿದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸಾಲ ಕೊಡುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟಿರುವುದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೇಗೆ ಮುನಿಸಿಪಲ್ ಸಂಸ್ಥೆಯೊಂದಕ್ಕೆ ಸಾಲ ಕೊಡುವುದು ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ನಮ್ಮಲ್ಲಿರುವ ನಿಯಮ ನಿಬಂಧನೆಗಳು ಅದಕ್ಕೆ ಹೊಂದಾಣಿಕೆಯಾಗುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈರೀತಿ ತೊಂದರೆಯಾಗಿರುವುದರಿಂದ ರೈತರ ಬೆಳೆಗೆ ಹೆಚ್ಚಿಗೆ ಬೆಲೆ ಬರದಿರುವುದಕ್ಕೆ ಅವಕಾಶವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ ಬಸಪ್ಪ.—ಸರ್ಕಾರದವರು ಒಂದು ಸ್ಪೆಷಲ್ ಕಮಿಟಿ ಮಾಡಿದ್ದಾರಲ್ಲ, ಆ ಕಮಿಟಿಯವರು ತಮ್ಮ ಅಭಿಪ್ರಾಯವನ್ನು ಹೇಳಿ ಸರ್ಕಾರದವರಿಗೆ ವರದಿ ಒಪ್ಪಿಸಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ನಾನೂ ಆ ಕಮಿಟಿಯ ಸದಸ್ಯನಾಗಿದ್ದೆ. ಕಮಿಟಿ ತನ್ನ ವರದಿಯನ್ನೊಪ್ಪಿಸಿದೆ.

ಶ್ರೀ ಜಿ. ಬಸಪ್ಪ.—ಈ ವರದಿಯ ಮೇಲೆ ತಾವು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದಿನ್ನೂ ಸರ್ಕಾರಕ್ಕೆ ಬರಬೇಕು.

ಶ್ರೀ ಜಿ. ಬಸಪ್ಪ.—ಅವರು ವರದಿಕೊಟ್ಟು ಎಷ್ಟು ದಿವಸವಾಯಿತು ?

Sri H. SIDDAVEERAPPA.—It is yet in the Registrar's office for finalising it.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇದೇ ರೀತಿ ರೆಗ್ಯುಲೇಟೆಡ್ ಮಾರ್ಕೆಟ್ ಹುಬ್ಬಳ್ಳಿಯಲ್ಲರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇದೆ.

ಶ್ರೀ ಎಸ್ ಆರ್. ನಾಗಪ್ಪಶೆಟ್ಟಿ.—ಆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲೇ ರೈತರೇ ಯಾರು ಬೇಕಾದರೂ ತಾವೇ ಸ್ವಂತವಾಗಿ ಮಾರಾಟ ಮಾಡುವುದಕ್ಕೆ ಅವಕಾಶವಿದೆಯೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆಗೊತ್ತಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗಿನ ನಿಮ್ಮ ಹರಾಜಿನ ಪದ್ಧತಿಯು ಅಡಿಕೆಯ ಬೆಲೆ ಬಿದ್ದು ಹೋಗಲು ಕಾರಣವಾಯಿತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹರಾಜನ್ನು ಕೂಗುವ ಸಂದರ್ಭದಲ್ಲಿ ಎಲ್ಲ ವರ್ತಕರೂ ಒಟ್ಟಾಗಿ ಮುಂಚೆಯೇ ಮಾತನಾಡಿಕೊಂಡು ಕೂಗಿ ಕಡಿಮೆ ಬೆಲೆಗೆ ಕೊಂಡು ಕೊಂಡು ಆಮೇಲೆ ಮಾಲನ್ನು ಹಂಚಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನು ತಪ್ಪಿಸುವುದಕ್ಕಾಗಿಯೇ, ಈಗ ಒಂದು ರೂಪಾಯಿ ಲೈಸೆನ್ಸ್ ತಿಂಗಳಿಗೆ ತೆಗೆದುಕೊಳ್ಳಬೇಕೆಂದು ಮಾಡಿರುವುದನ್ನು 15 ದಿವಸಕ್ಕೆ ಬೇಕಾದರೂ ತೆಗೆದು ಕೊಳ್ಳಬಹುದೆಂದು ಅನುಕೂಲ ಮಾಡಿದ್ದೇವೆ. ಹೀಗೆಲ್ಲಾ ಮಾಡಿದ್ದರೂ ಈ ರೀತಿ ತೊಂದರೆಯಾಗುತ್ತದೆಯೆಂದರೆ, ಅದು ಪ್ರಕೃತದಲ್ಲಿ ತಾತ್ಕಾಲಿಕವಾದದ್ದೆಂದು ಹೇಳಬೇಕು. Transition period ನಲ್ಲಿ ಹೀಗೆಲ್ಲಾ ತೊಂದರೆಗಳು ಉದ್ಭವಿಸುವುದು ಸಹಜ. ಒಟ್ಟಿನಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಭವಿಷ್ಯ ಚೆನ್ನಾಗಿರುತ್ತದೆಂದು ಹೇಳಬಲ್ಲೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೊದಲು ಗೋಡೌನ್ ರೆಂಟ್ ಏನೂ ಇರುತ್ತಿರಲಿಲ್ಲ. ಈಚೆಗೆ ರೆಗ್ಯುಲೇಟೆಡ್ ಮಾರ್ಕೆಟ್ ಬಂದಮೇಲೆ ಗೋಡೌನ್ ರೆಂಟ್ ತೆಗೆದುಕೊಳ್ಳುತ್ತಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆಯೂ ಬೇರೆ ರೀತಿಯಲ್ಲಿ ತೆಗೆದುಕೊಳ್ಳುತ್ತಿದ್ದರು.

ಶ್ರೀ ಎಂ. ರಾಜಶೇಖರ ಮೂರ್ತಿ.—ಅಲ್ಲಿ ಮಳಿಗೆಗಳಿಲ್ಲದೆ. ವ್ಯಾಪಾರ ಮಾಡಲಕ್ಕೆ ಬರುವ ರೈತರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಮಳಿಗೆಗಳಿಲ್ಲದೆ ತೊಂದರೆಯಾಗಿದೆ, ನಿಜ. ಇದೂ ತಾತ್ಕಾಲಿಕವಾದದ್ದು. ಇದಕ್ಕೂ ಏರ್ಪಾಡು ಮಾಡುತ್ತಿದ್ದೇವೆ. We know that warehouse is an important factor in the marketing of agricultural produce.

ಶ್ರೀ ಎಂ. ರಾಜಶೇಖರ ಮೂರ್ತಿ.—ವೇರ್ ಹೌಸ್ ಗಳ ಮೇಲೆ ಎಷ್ಟು ಹಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಿ ?

Sri H. SIDDAVEERAPPA.—We will examine it.

Work Service Rules.

Q.—310. Sri D. VENKATESH (Gandhinagar).—

Will the Government be pleased to state :—

the various amendments to Work Service Rules since 1942 with regard to daily-rated and monthly-rated employees of the Government Industrial Concerns ?

A.—Sri H. SIDDAVEERAPPA (Minister for Home and Industries).—

A copy of the Work Service Rules brought up to date is laid on the Table of the House. The rules that were amended since 1942 have been indicated therein, with the dates on which they were amended.

Sri D. VENKATESH.—Is it not a fact that some of these Work Service Rules also form conditions of service in the Government concerns ?

Sri H. SIDDAVEERAPPA.—Yes.

Sri D. VENKATESH.—May I know subsequent to 1942 and prior to April 1952 how many times these Work Service Rules are amended ?

Sri H. SIDDAVEERAPPA.—I have placed the Government Order on the table, which gives the entire details and if the Hon'ble Member so desires, I will give a copy to him also.

Sri D. VENKATESH.—May I know whether these amendments are in conformity with the Mysore Labour Act then in existence ?

Sri H. SIDDAVEERAPPA.—So far as I can understand it, they are. If anything needs to be done, we will examine it.